### ಖುಷಿ ತುಂಬಿದ 'ಲಾಲಿ ಲಾಲಿ'

'ಲಾಲಿ ಲಾಲಿ' (ಜು. 04, ಚಂಪಕಮಾಲಾ) 'ವಿಚಾರ ಲಹರಿ' ಓದುತ್ತಾ ನನ್ನ ನೆನಪುಗಳು ಮರುಕಳಿಸಿದವು. ನನ್ನ ಮಗಳು ಮಗುವಾಗಿದ್ದಾಗ ನನಗೆ ಹಾಡು ಹಾಡಲು ಬರದಿದ್ದರೂ ಮನಸಿಗೆ ತೋಚಿದ್ದೆಲ್ಲವನ್ನು ಹೇಳುತ್ತಾ ಹಾಡುತ್ತಿದ್ದೆ. ಅದೇ ಜೋಗುಳ! ನನ್ನ ಮಗು ಸದ್ದು ಮಾಡದೇ ಮಲಗಿದೆ ಎಂದು ತೊಟ್ಟಿಲು ತೂಗುವುದು ನಿಲ್ಲಿಸಿ ನೋಡಿದರೆ ಕಣ್ಣು ಬಿಟ್ಟು ನಗುತ್ತಾ ಇರುತಿತ್ತು. ಮತ್ತೆ ಮಲಗಲು ಲಾಲಿ ಹಾಡಬೇಕಿತ್ತು. ಈಗ ನನ್ನ ಮೊಮ್ಮಗನನ್ನು ಅದೇ ರೀತಿ ಲಾಲಿ ಹಾಡಿ ತೊಟ್ಟಿಲು ತೂಗಬೇಕು. ತಾಯಂದಿರು ತಮ್ಮ ಮಕ್ಕಳಿಗಾಗಿ ಕವಿಗಳಾಗುತ್ತಾರೆ. ಹಾಗೇ ಸಾಹಿತಿಗಳು ತಾಯಿ ಮನಸ್ಸಿನ ಸಹೃದಯಿಗಳಾಗುತ್ತಾರೆ.

—ಸಿ. ಸರಳಾಮಣಿ, ಮೈಸೂರು

### ಪ್ರಬುದ್ಧ ಚಿಂತನೆಗಳು

'ಪ್ರಕೃತಿ ಜೊತೆ ಸಹಬಾಳುವೆ ಕಲಿಸುವುದು ಸಾಹಿತ್ಯದ ಗುರಿ' (ಜು. 04, ರಾಘವೇಂದ್ರ ಕೆ. ತೊಗರ್ಸಿ), ಕೃಷ್ಣಮೂರ್ತಿ ಬಿಳಿಗಿರಿಯವರ ಸಂದರ್ಶನ ಓದಿ ಬೆರಗುಗೊಂಡೆ. ಅವರ ಚಿಂತನೆಗಳು ಬಹಳ ಪ್ರಬುದ್ಧ. ಒಂದೊಂದು ಮಾತೂ ಇದ್ದು ಸತ್ವತಿರುವ ನಮ್ಮನ್ನು ಬಡಿದೇಳಿಸುವಂತಿದೆ.

— ಹೆಗ್ಗಾಪುರ ರಾಘವೇಂದ್ರ ಕುಲಕರ್ಣಿ, ಹೊಸಪೇಟೆ

### ನನ್ನ ನೆಚ್ಚಿನ ಲೇಖಕಿ

ಈಗಿನ ಹುಡುಗಿಯರೇ ಹೀಗೇ! (ಜು. 04, ಸಿ.ಎನ್. ಮುಕ್ತಾ) ಕಥೆ ಸುಂದರವಾಗಿದೆ. ನನ್ನ ನೆಚ್ಚಿನ ಲೇಖಕಿಯ ಮತ್ತೊಂದು ಕಥೆ ಓದಿ ಸಂತಸವಾಯಿತು. ಇದೇ ರೀತಿಯ ಕಥೆಗಳಿಂದ 'ಸುಧಾ' ನಮ್ಮನ್ನು ರಂಜಿಸುತ್ತಿರಲಿ.

—ಪುಷ್ಪಾ ರಾಣೆ




### ಈಗಿನ ಕಾಲದ ಕಥೆ

ಸಿ.ಎನ್. ಮುಕ್ತಾ ಅವರ ಕಥೆ, ಈಗಿನ ಕಾಲದ ಮನೆ ಮನೆಯ ಕಥೆಯೇ ಆಗಿದೆ. ಕಥೆಯನ್ನು ಓದುಗರಿಗೆ ಇಷ್ಟವಾಗುವಂತೆ ಕಟ್ಟಿಕೊಟ್ಟಿದ್ದು, ಜೀವನದಲ್ಲಿ ಹೊಂದಾಣಿಕೆ ಎಷ್ಟು ಮುಖ್ಯ ಎಂಬ ಸಂದೇಶವನ್ನೂ ನೀಡಿದಂತಿದೆ.

—ಚಿದಂಬರ, ಬೆಂಗಳೂರು




### ಅರ್ಥ ಮಾಡಿಸುವವರಾರು?

'ಜೀವ ಸುಡುತಲಿದೆ ಬಿಸಿ ಗಾಳಿಯ ಕೆನ್ನಾಲಿಗೆ' (ಜು. 04, ರಾಜಲಕ್ಷ್ಮಿ ಕೋಡಿಬೆಟ್ಟು) ಮುಖಪುಟ ಲೇಖನ ಮೌಲಿಕವಾಗಿದೆ. ಪ್ರಕೃತಿಯ ಮಗುವಾದ ಮಾನವ, ತಾಯಿ ಪ್ರಕೃತಿಯನ್ನು ನಂಬಿ, ಗೌರವಿಸಿ, ಪ್ರೀತಿಸದೇ ಇದ್ದಲ್ಲಿ ಅವನ ಇರುವಿಗೆ ಎದುರಾಗಲಿರುವ ಅಪಾಯವನ್ನು ಸೂರ್ಯ ಸ್ಪಷ್ಟವಾಗಿ ನಿರೂಪಿಸಿದ್ದಾನೆ. ಅಹಂಕಾರಿ ಮಾನವ ತನ್ನ ತಪ್ಪನ್ನು ತಿದ್ದುಕೊಳ್ಳುವನೇ? ತನ್ನ ಜೀವ ಉಳಿಸಿಕೊಳ್ಳುವ ಸರಿದಾರಿಯನ್ನು ಕಂಡುಕೊಳ್ಳುವನೇ? ಇದಕ್ಕೆ ಉತ್ತರವಿಲ್ಲ.

ಮಾನವ ತನ್ನನ್ನು ತಾನು ಉಳಿಸಿಕೊಳ್ಳುವ ಜಾಣತನ ಮೆರೆದರೆ ಜಗತ್ತಿನ ಸಕಲ ಜೀವಿಗಳೂ ಉಳಿಯುತ್ತವೆ. ಸ್ವಾರ್ಥ ಜೀವಿಯಾದ ಈ ಮಾನವನಿಗೆ ಇದನ್ನು ಅರ್ಥ ಮಾಡಿಸುವವರು ಯಾರು?

—ಶ್ರೀಧರ ಪಿಸ್ಸೆ

### ಇನ್ನಾದರೂ ಎಚ್ಚೆತ್ತುಕೊಳ್ಳಬೇಕು

ಬಿಸಿಗಾಳಿಯ ಕುರಿತ ಮುಖಪುಟ ಲೇಖನ ಪ್ರತಿಯೊಬ್ಬರ ಅವಗಾಹನೆಗೆ ತರಬೇಕಾದ ನೈಜ್ಯ ಸ್ಥಿತಿಯ ನಿರೂಪಣೆ. ಇನ್ನೂ ಎಚ್ಚೆತ್ತುಕೊಳ್ಳದಿದ್ದರೆ ನಮ್ಮ ಅವಸಾನಕ್ಕೆ ನಾವೇ ಷರಾ ಬರೆದಂತೆ. ಈ ಸ್ಥಿತಿ ಹದಗೆಡುವ ಮುನ್ನ ಕಾರ್ಯಪ್ರವೃತ್ತರಾಗಬೇಕು. ಪರಿಸರಕ್ಕೆ ಪೂರಕವಾಗಿ ನಡೆದುಕೊಳ್ಳಬೇಕು.

—ಉಷಾಲಕ್ಷ್ಮಿ ಅರವಿಂದ ಹೊಳ್ಳ, ಬೆಂಗಳೂರು

### ಪ್ರಕೃತಿಯ ಜೊತೆ ನಡೆಯೋಣ

ಲೇಖನ ಎಚ್ಚರಿಕೆ ಗಂಟೆಯಂತಿದೆ. ಪ್ರಕೃತಿ ನಾವು ಹೇಳಿದಂತೆ ಕೇಳುವುದಿಲ್ಲ, ಅದು ಹೇಳಿದಂತೆ ನಮ್ಮ ಬದುಕು ನಡೆಸಬೇಕು. ನಮ್ಮ ಕೈಯಲ್ಲಿ ಏನೂ ಇಲ್ಲ ಎಂಬುದು ಮತ್ತೆ ಮತ್ತೆ ನಿರೂಪಿತವಾಗುತ್ತಿದೆ. ಇದನ್ನು ಮನುಷ್ಯನು ಅರಿಯಬೇಕು.

—ಟಿ. ಶಿವಮೂರ್ತಿ ಉಪ್ಪಾರ, ಚಾಮರಾಜನಗರ

**ಪ್ರತಿಕ್ರಿಯಿಸಿ**

ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ.
ಇ–ಮೇಲ್: feedback@sudha.co.in

### ಸೌಂದರ್ಯಧಾರೆ

'ಸ್ವರ್ಗದ ಒಡವೆಯಿದು ಹೂ ಕಣಿವೆ' (ಜು. 04, ಗುರುರಾಜ್ ಎಸ್. ದಾವಣಗೆರೆ) ಲೇಖನ ಓದಿದೆ. ರುದ್ರ ಭಯಾನಕ ಘಟನೆಗಳಿಂದ ನರಳುವ ಅಲ್ಲಿಯ ಜನತೆಗೆ ಹಸುರಿನ ನಡುವೆ ಬಣ್ಣಗಳನ್ನು ತುಂಬಿ ಸೌಂದರ್ಯಧಾರೆಯನ್ನೇ ಹೊತ್ತು ನಿಂತ ಹೂ ಕಣಿವೆ ನಿಜಕ್ಕೂ ಆಶಾದೀಪದಂತಿದೆ.

ಹೂ ಕಣಿವೆಯ ಪರಿಚಯದ ಜೊತೆಗೆ ಚಿತ್ರಗಳು ಮುದ ನೀಡಿದವು.

—ಕೊಹಿಮ ಬಸರಕೋಡು



### ಕಲ್ಪನಾಲೋಕದಲ್ಲಿ ವಿಹರಿಸಿದೆ

ಉತ್ತರಾಖಂಡದ ಈ ಸುಂದರ ಹೂ ಕಣಿವೆ ಕುರಿತ ಲೇಖನ ಓದುತ್ತಿದ್ದಂತೆ ಕಲ್ಪನಾಲೋಕದಲ್ಲಿ ವಿಹರಿಸಿ ಬಂದಂಥ ಅನುಭವವಾಯಿತು. ಕಣಿವೆಯ ಸೌಂದರ್ಯದಲ್ಲಿ ಮಿಂದೆದ್ದಂತೆ ಅನಿಸಿತು.

—ಕೃಷ್ಣಕುಮಾರ್, ದಾವಣಗೆರೆ

### ಉಪಯುಕ್ತ ಆರೋಗ್ಯ ಮಾಹಿತಿ

ಪ್ರೊಟೀನುರಿಯಾ; ಕಿಡ್ನಿ ಕಾಯಿಲೆಯ ಮುನ್ಸೂಚನೆ (ಜು. 04, ಉಮಾ ಅನಂತ್) ಆರೋಗ್ಯ ಲೇಖನ ಮಾಹಿತಿಪೂರ್ಣವಾಗಿದೆ. ಸಾಮಾನ್ಯರಿಗೆ ಅರಿವಿಲ್ಲದ ಆರೋಗ್ಯ ಸಮಸ್ಯೆಯ ಬಗ್ಗೆ ತಿಳಿವಳಿಕೆ ನೀಡಿದೆ. ಆರೋಗ್ಯವೇ ತುಟ್ಟಿಯಾಗಿರುವ ಈ ಕಾಲದಲ್ಲಿ ಬಹು ಉಪಯುಕ್ತ ಲೇಖನ.

—ದಿವ್ಯಾ ಕೆ., ಕೋಲಾರ

### ಎಷ್ಟೊಂದು ವೈವಿಧ್ಯ!

'ಮನುಷ್ಯನ ಹಸ್ತಕ್ಷೇಪ ನೆಚ್ಚಿದ ಮನಿಪ್ಲಾಂಟ್' (ಜು. 04, ಸೀಮಾ ಹೆಗಡೆ) 'ಹಸುರುಪ್ರೀತಿ' ಲೇಖನ ಇಷ್ಟವಾಯಿತು. ಹಲವರ ಮನೆಯಲ್ಲಿ, ಕಚೇರಿಯಲ್ಲಿ, ಅಷ್ಟೇ ಏಕೆ ಎಲ್ಲಿ ನೋಡಿದರಲ್ಲಿ ಮನಿಪ್ಲಾಂಟ್‌ಗಳು ಸಾಮಾನ್ಯವಾಗಿರುತ್ತವೆ. ಆದರೆ ಮನಿಪ್ಲಾಂಟ್‌ನಲ್ಲಿಯೂ ಇಷ್ಟೊಂದು ವೈವಿಧ್ಯವಿದೆ ಎಂಬುದು ಲೇಖನ ಓದಿದ ನಂತರ ತಿಳಿಯಿತು. ಅಚ್ಚರಿಯೂ ಆಯಿತು.

—ಶೈಲಜಾ ಬಿ.ಎನ್., ನೆಲಮಂಗಲ

